ಗತಕಾಲದ ಯಾತ್ರೆ ತೇಲಿಬಂತು. ಎಂ.ಎ. ಚಿನ್ನದಪದಕ ಪಡೆದು ಪಾಸಾಗಿ ಸಮಾಜದಲ್ಲಿ ತೂಕವೇರಿತ್ತು. ಪಿಎಚ್.ಡಿ. ಮಾಡಿದವರಿಗೆ ತಡವಿಲ್ಲದೆ ಕೆಲಸ ಸಿಕ್ಕಿತ್ತು. ಆನೇಕಲ್ಲಿನ ಚಿನ್ನಸ್ವಾಮಿ ಸ್ವತಃ ಮನೆಗೆ ಬಂದು ಪ್ರಸ್ತಾಪವಿಟ್ಟಿದ್ದರು. ಮೂರುನಾಕು ಕಡೆ ತೆಂಗಿನ ತೋಟ, ಕಟ್ಟಡ ಕಂಟ್ರಾಕ್ಟು, ಪ್ರಭಾವಿ ಜನಗಳ ಜತೆ ಒಡನಾಟ. ಅವರ ನಾಕು ಹೆಣ್ಣುಮಕ್ಕಳಲ್ಲಿ ಎರಡನೆಯವಳು; ಬಿ.ಎ. ಮಾಡಿಕೊಂಡಿದಾಳೆ ಅಂದಿದ್ದರು. ಹೆಣ್ಣು ನೋಡಲು ಹೋದವರಿಗೆ ಸುಖದಲ್ಲಿ ಬೆಳೆದ ತಾಪಸಿ ಒಪ್ಪಿಗೆಯಾಗಿದ್ದಳು. ಅಯಾಚಿತವಾಗಿ ಕಣ್ಣು ಅಡುಗೆಕೋಣೆಯತ್ತ ಹೊರಳಿತು. ಈ ಕಡೆ ಬೆನ್ನು ಹಾಕಿ ಊಟದ ಮೇಜಿನಮೇಲೆ ಬಟ್ಟಲನ್ನು ಜೋಡಿಸುತ್ತಲಿದ್ದುದು ಕಾಣಿಸುತ್ತಿತ್ತು. ಈಗೀಗ ದಪ್ಪವಾಗಿದ್ದಾಳೆ. ತೆಳುವಾದ ಸೊಂಟ, ಹೊಟ್ಟೆ ಎಲ್ಲ ಅಚ್ಚುಕಟ್ಟಾಗಿತ್ತು. ಕೆಳತುಟಿ ಮೇಲಿನದರಕಿಂತ ಸ್ವಲ್ಪವೆ ಮುಂದಿದ್ದು ನಸು ಕೆಳಬಾಗಿತ್ತು. ನಾಗಪುರ ಕಿತ್ತಳೆಹಣ್ಣಿನ ಸೊಳೆಯನ್ನು ಇಟ್ಟಂತೆ ಅದೇ ಬಾಗು; ಅದೇ ಸಹಜ ಗುಲಾಬಿ ಬಣ್ಣ; ನವಿರಾದ ಗೆರೆಗಳು. ಉನ್ಮಾದವೇರಿ ಮುತ್ತಿಡುವಾಗ ಎಲ್ಲಿ ಕಚ್ಚಿಬಿಡುತ್ತೇನೊ ಅಂತ ತನಗೇ ಆತಂಕವಾಗುತ್ತಿತ್ತಲ್ಲ. ಹೌದೂ...



ಇದನ್ನೆಲ್ಲ ವರ್ಣಿಸಿ ತಾನವಳನ್ನು ಯಾವಾಗಾದರು ಹೊಗಳಿದ್ದೆನೇ ಅನ್ನುವ ಪ್ರಶ್ನೆ ಉದ್ಭವಿಸಿತು. ಅನುಭವಿಸುತ್ತಿದ್ದರೂ ಇದನ್ನೆಲ್ಲ ವಿವರಿಸುತ್ತ ಯಾಕೆ ಒಮ್ಮೆಯೂ ಮೆಚ್ಚುಗೆ ವ್ಯಕ್ತಪಡಿಸಲು ಹೊಳೆಯಲಿಲ್ಲ? ವರ್ಣನೆ ಕೇಳಿ ಖುಷಿಯಲ್ಲಿ ಅರಳುವ ಕಣ್ಣುಗಳು, ಕೆನ್ನೆಯಲ್ಲಿ ಹೆಪ್ಪುಗಟ್ಟುವ ಅರುಣರಾಗ, ನಡುಗುವ ತುಟಿಗಳ ಸೊಬಗು ಸುಖವನ್ನು ಇನ್ನಷ್ಟು ಪಾಕಗೊಳಿಸುತ್ತ ಕೂಡುವಲ್ಲಿಯ ಕೊಡುವಿಕೆ ಇನ್ನಷ್ಟು ಆಪ್ತವೂ ಮುಕ್ತವೂ ಆಗಬಹುದಿತ್ತೇನೋ. ವಿಜಯಪತಾಕೆಯ ಹಳೇ ನೆನಪುಗಳಲ್ಲಿ ವಿಹರಿಸುವುದು ಎಂತಹ ಅಪ್ಯಾಯಮಾನ ಅನುಭವ ಅನಿಸಿ ಅಚ್ಚರಿಯಾಯಿತು. ಇಷ್ಟಕ್ಕು ತಾನು ಇತಿಹಾಸದ ಪ್ರೊಫೆಸರು ಅಂತ ನೆನೆಸಿಕೊಂಡವರಿಗೆ ತಾನು ವರ್ತಮಾನದಲ್ಲಿ ತನಗಿರಬಹುದಾಗಿದ್ದ ಎಲ್ಲ ಸಾಧ್ಯತೆಗಳನ್ನು ಇತಿಹಾಸದಲ್ಲೆ ಕಂಡುಕೊಳ್ಳುತ್ತಿದ್ದೇನೆಯೇ ಅನ್ನುವ